ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉನಿ : ಸುಮಪ : 2018–19 :** **ದಿನಾಂಕ : 05–10–2018**

# ಪತ್ರಿಕಾ ಆಮಂತ್ರಣ

**1. ಸ್ವಚ್ಛ ಸರ್ವೇಕ್ಷಣ್ –2019 ಸಮೀಕ್ಷೆ ಕುರಿತು ಒಂದು ದಿನದ ಕಾರ್ಯಾಗಾರ:**
**(ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಸಹಯೋಗದೊಂದಿಗೆ)**
**ದಿನಾಂಕ: 06–10–2018 ಶನಿವಾರ ಸಮಯ: ಬೆಳಿಗ್ಗೆ 9–30 ಗಂಟೆಗೆ**
**ಸ್ಥಳ: ಟಾಟಾ ಆಡಿಟೋರಿಯಂ, ಭಾರತೀಯ ವಿಜ್ಞಾನ ಸಂಸ್ಥೆ, (IISc) ಮಲ್ಲೇಶ್ವರಂ, ಬೆಂಗಳೂರು**

**2. ಪತ್ರಿಕಾಗೋಷ್ಠಿ:**

ಪಿ.ಜಿ.ಆರ್. ಸಿಂಧ್ಯ.
ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ದಿನಾಂಕ: 06–10–2018, ಶನಿವಾರ ಸಮಯ: ಬೆಳಿಗ್ಗೆ 11–30 ಗಂಟೆಗೆ
ಸ್ಥಳ: ಬೆಂಗಳೂರು ಪ್ರೆಸ್ ಕ್ಲಬ್, ಕಬ್ಬನ್‌ಪಾರ್ಕ್, ಬೆಂಗಳೂರು

**3.ಕರ್ನಾಟಕ ಚಲನಚಿತ್ರ ಅಕಾಡೆಮಿಯ ಕಾರ್ಯಕ್ರಮ**
**‘ ಬೆಳ್ಳಿ ಹೆಜ್ಜೆ ‘ ಯಲ್ಲಿ ನಮ್ಮೊಂದಿಗೆ ಡಾ. ಬಿ.ಎಲ್. ವೇಣು**

**ಮುಖ್ಯ ಅತಿಥಿಗಳು:**

ಎನ್.ಆರ್. ವಿಶುಕುಮಾರ್, ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು.

ಎಸ್.ಎ. ಚಿನ್ನೇಗೌಡ, ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಬೆಂಗಳೂರು.

ಎಸ್.ವಿ. ರಾಜೇಂದ್ರಸಿಂಗ್ ಬಾಬು, ಹಿರಿಯ ಚಲನಚಿತ್ರ ನಿರ್ದೇಶಕರು.

ದೊಡ್ಡಣ್ಣ, ಹಿರಿಯ ಚಲನಚಿತ್ರ ನಟರು

ರಾಕ್‌ಲೈನ್ ವೆಂಕಟೇಶ್, ಹಿರಿಯ ಚಲನಚಿತ್ರ ನಟರು ಹಾಗೂ ನಿರ್ಮಾಪಕರು

**ಅಧ್ಯಕ್ಷತೆ:**

ಡಾ. ನಾಗತಿಹಳ್ಳಿ ಚಂದ್ರಶೇಖರ್, ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ಅಕಾಡೆಮಿ, ಬೆಂಗಳೂರು.

ದಿನಾಂಕ: 06-10-2018, ಶನಿವಾರ ಸಮಯ: ಸಂಜೆ 5-00 ಗಂಟೆಗೆ
ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರ ಪಾರ್ಕ್ ರಸ್ತೆ, ಬೆಂಗಳೂರು.

# ಪತ್ರಿಕಾ ಪ್ರಕಟಣೆ

**ಸಂಖ್ಯೆ:1096/1196**

## ಫ್ಲೋರೋಸಿಸ್ ತಡೆಗೆ ಎಲ್ಲಾ ಇಲಾಖೆಗಳು ಕೈಜೋಡಿಸಬೇಕು.

**- ಉಪ ಕಾರ್ಯದರ್ಶಿ ಡಾ. ಸಿ. ಸಿದ್ದರಾಮಯ್ಯ**

ಬೆಂಗಳೂರು, ಅಕ್ಟೋಬರ್ 5, 2018 (ಕರ್ನಾಟಕ ವಾರ್ತೆ)

ದಂತ, ಮೂಳೆ ಹಾಗೂ ಸ್ನಾಯುಗಳಿಗೆ ಹಾನಿಯಾಗುವ ಫ್ಲೋರೋಸಿಸ್ ನಿಯಂತ್ರಣಕ್ಕೆ ಸಮಸ್ತ ಇಲಾಖೆಗಳು ಕೈಜೋಡಿಸಬೇಕೆಂದು ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಡಾ. ಸಿ. ಸಿದ್ದರಾಮಯ್ಯ ಅವರು ತಿಳಿಸಿದರು.

ಅವರು ಇಂದು ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾದ ರಾಷ್ಟ್ರೀಯ ಫ್ಲೋರೋಸಿಸ್ ತಡೆ ಹಾಗೂ ನಿಯಂತ್ರಣ ಕಾರ್ಯಕ್ರಮದ ಅಂತರ ಇಲಾಖಾ ಸಮನ್ವಯ ಸಮಿತಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಫ್ಲೋರೋಸಿಸ್ ಕಾಯಿಲೆ ಹೆಚ್ಚಾಗಿ ಬೆಟ್ಟಗುಡ್ಡಗಳ ಪ್ರದೇಶದಲ್ಲಿ ಕಾಣಿಸಿಕೊಳ್ಳುತ್ತದೆ. ತುಮಕೂರಿನ ಪಾವಗಡ, ಚಿಕ್ಕಬಳ್ಳಾಪುರದ ಬಾಗೇಪಲ್ಲಿಯಲ್ಲಿ ಇದರ ಪ್ರಕರಣಗಳು ಹೆಚ್ಚು. ಬಾಲ್ಯಾವಸ್ಥೆಯಲ್ಲಿಯೇ ಇದನ್ನು ತಡೆಗಟ್ಟುವುದು ಸೂಕ್ತ. ನಾವು ಶುದ್ಧ ಕುಡಿಯುವ ನೀರು ಮತ್ತು ಆಹಾರವನ್ನು ಸೇವಿಸುವುದು ಒಳ್ಳೆಯದು ಎಂದರು.

ಜಿಲ್ಲಾ ಆರ್.ಸಿ.ಎಚ್. ಅಧಿಕಾರಿಗಳಾದ ಮಹೇಶ್ ಕುಮಾರ್ ಮಾತನಾಡಿ ಎಲ್ಲಾ ತಾಲ್ಲೂಕು ಮಟ್ಟದ ಪ್ರದೇಶಗಳಲ್ಲಿ ಸಾರ್ವಜನಿಕರ ಅನುಕೂಲಕ್ಕೆ ಶುದ್ಧ ನೀರಿನ ಘಟಕ ಸ್ಥಾಪಿಸಬೇಕು. ವಿದ್ಯುನ್ಮಾನ ಹಾಗೂ ದೃಶ್ಯ ಮಾಧ್ಯಮಗಳು ಇದರ ದುಷ್ಪಾರಿಣಾಮಗಳ ಬಗ್ಗೆ ತಿಳುವಳಿಕೆ ಮೂಡಿಸಬೇಕು. ಮಳೆ ನೀರು ಸಂಗ್ರಹಣೆ, ಪ್ಲಾಸ್ಟಿಕ್ ನಿಷೇಧ ಆಗಬೇಕು. ಎಲ್ಲಾ ಇಲಾಖೆಗಳು ಒಗ್ಗೂಡಿ ಈ ಫ್ಲೋರೋಸಿಸ್ ನಿಯಂತ್ರಣ ಮಾಡಬೇಕೆಂದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕೃಷ್ಣಪ್ಪ , ಫ್ಲೋರೋಸಿಸ್ ಸಮನ್ವಯಾಧಿಕಾರಿ ರೂಪಶ್ರೀ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

**ಏನಿದು ಫ್ಲೋರೋಸಿಸ್:**

ಫ್ಲೋರೈಡ್ ಅಂಶ ಹೆಚ್ಚಾಗಿರುವ ಆಹಾರ ಹಾಗೂ ನೀರು ಸೇವನೆಯಿಂದ ಫ್ಲೋರೋಸಿಸ್ ಒಂದು ಪಿಪಿಎಂ (ಹತ್ತು ಲಕ್ಷದಲ್ಲಿ ಒಂದು ಭಾಗ) ಗಿಂತಲೂ ಫ್ಲೋರೈಡ್ ಅಂಶ ಹೆಚ್ಚಾಗಿದ್ದರೆ ಫ್ಲೋರೋಸಿಸ್ ಕಾಯಿಲೆ ಕಾಯಿಲೆ ಬರುತ್ತದೆ. ಅಲ್ಲದೆ, ಕೆಲವು ಔಷಧಿಗಳ ಸೇವನೆ, ಕಾರ್ಖಾನೆಗಳಿಂದ ಹೊರಹೊಮ್ಮುವ ಧೂಳು ಮುಂತಾದವುಗಳಿಂದ ಚಿಕ್ಕಮಕ್ಕಳು, ವಯಸ್ಕರು, ಮಹಿಳೆಯರು ಹೀಗೆ ಎಲ್ಲರನ್ನೂ ಈ ಕಾಯಿಲೆ ಕಾಡುತ್ತದೆ. ಫ್ಲೋರೋಸಿಸ್‌ಗಳಲ್ಲಿ 3 ವಿಧ 1. ದಂತ ಫ್ಲೋರೋಸಿಸ್ 2. ಮೂಳೆಗಳ ಫ್ಲೋರೋಸಿಸ್ 3. ದೇಹದ ಇತರೆ ಭಾಗದ ಫ್ಲೋರೋಸಿಸ್. ಫ್ಲೋರೈಡ್‌ನ ಮೂಲಗಳಾದ ಅಂತರ್ಜಲ, ಹಾಲಿಲ್ಲದ ಕಪ್ಪು ಟೀ, ಹೊಗೆಸೊಪ್ಪು ಡಬ್ಬದ ತಿಂಡಿ, ಸೋಡಿಯಂ ಫ್ಲೋರೈಡ್ ಮಾತ್ರೆ. ಕ್ಯಾನ್ಸರ್ ನಿರೋಧಕ ಔಷಧಿಗಳು, ಫ್ಲೋರೈಡ್ ಇರುವ ಮಣ್ಣಿನ ಧೂಳು, ಗಣಿ ಕೈಗಾರಿಕೆಯಿಂದ ಹೊಮ್ಮುವ ಹೊಗೆ, ಫ್ಲೋರೈಡ್‌ಯುಕ್ತ ಟೂತ್‌ಪೇಸ್ಟ್, ಮೌತ್ ವಾಶ್, ಸೌಂಧರ್ಯವರ್ಧಕ, ಇತ್ಯಾದಿ.

ದೇಹದ ಮೃದು ಅಂಗಾಂಶಗಳು, ಸ್ನಾಯು ಹಾಗೂ ಕೆಂಪು ರಕ್ತಕಣಗಳು, ಜೀರ್ಣಾಂಗಗಳು ಮುಂತಾದವುಗಳಲ್ಲಿ ಕಂಡು ಬರುತ್ತದೆ. ಹೊಟ್ಟೆ ನೋವು, ಬೇಧಿ ಮತ್ತು ಅಜೀರ್ಣ ಉಂಟಾಗುತ್ತದೆ.

ಮಕ್ಕಳಲ್ಲಿ ಹಲ್ಲುಗಳ ಬೆಳವಣಿಗೆಯ ಸಮಯದಲ್ಲಿ ಹೆಚ್ಚು ಫ್ಲೋರೈಡ್ ಅಂಶವಿರುವ ನೀರು, ಕೆಲವು ಫ್ಲೋರೈಡ್‌ಯುಕ್ತ ಪದಾರ್ಥ ಸೇವಿಸಿದರೂ ಫ್ಲೋರೋಸಿಸ್ ಬರುತ್ತದೆ. 8 ವರ್ಷದೊಳಗಿನ ಮಕ್ಕಳಿಗೆ ಹೆಚ್ಚಾರಿ ಇದು ಬರುತ್ತದೆ. ತೀವ್ರತರದ ಫ್ಲೋರೋಸಿಸ್‌ನನ್ನು ಗುಣಪಡಿಸಲು ಆಗದು. ಹಲ್ಲುಗಳ ಮೇಲೆ ಹಳದಿ ಬಣ್ಣ ಅಥವಾ ಕಂದು ಬಣ್ಣ ಉಂಟಾಗುತ್ತದೆ. ಅಲ್ಲದೆ, ಮೂಳೆ, ಕೀಲುನೋವು ಸಹ ಬರುತ್ತದೆ. ಸಾರ್ವಜನಿಕರಿಗೆ ಈ ಬಗ್ಗೆ ಅರಿವು ಮೂಡಿಸುವುದು ಬಹಳ ಅಗತ್ಯ. ಶಾಲಾ ಕಾಲೇಜುಗಳ ಆವರಣದಲ್ಲಿ ನೆಲ್ಲಿಕಾಯಿ ಬೆಳೆಯುವುದರಿಂದ ಇದರ ಸೇವನೆ ಫ್ಲೋರೋಸಿಸ್ ತಡೆಯುತ್ತದೆ. ಎಲ್ಲರೂ ಶುದ್ಧನೀರು, ಆಹಾರ ಸೇವಿಸಿದರೆ ಫ್ಲೋರೋಸಿಸ್ ಕಾಯಿಲೆ ಸಂಪೂರ್ಣ ನಿರ್ಮೂಲನೆಯಾಗುತ್ತದೆ.

**ಸಂಖ್ಯೆ:1097/1197**

**ಎಸಿಬಿಯಿಂದ ಭ್ರಷ್ಟಾಚಾರ ಆರೋಪಿತ 02 ಅಧಿಕಾರಿಗಳ ವಿರುದ್ಧ ದಾಳಿ**
**ಇಂದು ಎಸಿಬಿ ಬೆಂಗಳೂರು ನಗರದ ವಿಭಾಗದ ಮತ್ತು ಇತರೆ ತಂಡಗಳಿಂದ 08 ವಿವಿಧ ಸ್ಥಳಗಳಲ್ಲಿ ಕಾರ್ಯಾಚರಣೆ**

**ಬೆಂಗಳೂರು, ಅಕ್ಟೋಬರ್ 5, 2018 (ಕರ್ನಾಟಕ ವಾರ್ತೆ)**

ದಿನಾಂಕ: 05.10.2018 ರಂದು ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ವಿಭಾಗದ ಮತ್ತು ಇತರೆ ತಂಡಗಳಿಂದ ಬೆಂಗಳೂರು ನಗರದ ವಿವಿಧ ಸ್ಥಳಗಳಲ್ಲಿ ಹಾಗು ತುಮಕೂರು ಜಿಲ್ಲೆಯ ಒಂದು ಕಡೆ **02 ಸರ್ಕಾರಿ ನೌಕರರು** ತಮ್ಮ ಬಲ್ಲ ಮೂಲಗಳಿಗಿಂತ ಅಸಮತೋಲನ ಆಸ್ತಿ-ಪಾಸ್ತಿಗಳನ್ನು ಹೊಂದಿರುವ ಬಗ್ಗೆ ವಿಶ್ವಾಸಾರ್ಹ ಮಾಹಿತಿ ಸಂಗ್ರಹಿಸಿ ಅಕ್ರಮ ಆಸ್ತಿ ಗಳಿಕೆ ಪ್ರಕರಣಗಳನ್ನು ದಾಖಲಿಸಿ ಅವರಿಗೆ ಸಂಬಂಧಿಸಿದ **08 ಸ್ಥಳಗಳ ಮೇಲೆ** ಇಂದು ದಾಳಿ ನಡೆಸಿರುತ್ತದೆ. ಶೋಧನಾ ಕಾರ್ಯವು ಮುಂದುವರೆದಿದ್ದು ಈವರೆಗೆ ಶೋಧನೆ ನಡಸಲಾದ ಜಾಗಗಳ ಮಾಹಿತಿ ಈ ಕೆಳಕಂಡಂತಿರುತ್ತವೆ.

1. **ಶ್ರೀ ಎನ್.ಜಿ ಗೌಡಯ್ಯ, ಇಂಜಿನಿಯರ್ ಆಫೀಸರ್-5, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೇಂದ್ರ ಕಛೇರಿ,ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು.**

   ಇವರ ಬೆಂಗಳೂರು ನಗರದ ವಾಸದ ಮನೆ, ಇವರ ಸಂಬಂಧಿಕರ ಬೆಂಗಳೂರು ನಗರದಲ್ಲಿನ ಮತ್ತು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಮನೆ ಹಾಗೂ ಇವರು ಕರ್ತವ್ಯ ನಿರ್ವಹಿಸುತ್ತಿರುವ ಇಂಜಿನಿಯರ್ ಆಫೀಸರ್-5 ರವರ ಕಛೇರಿ, ಬಿಡಿಎ, ಬೆಂಗಳೂರು.

2. **ಶ್ರೀ ಸ್ವಾಮಿ, ಟಿ.ಆರ್, ಮುಖ್ಯ ಅಭಿವೃದ್ಧಿ ಅಧಿಕಾರಿ, ಕೆ.ಐ.ಎ.ಡಿ.ಬಿ, ಮುಖ್ಯ ಕಛೇರಿ, ಖನಿಜ ಭವನ, ಬೆಂಗಳೂರು.**

   ಇವರ ಬೆಂಗಳೂರು ನಗರದಲ್ಲಿನ ನಿವಾಸ, ಹಾಗೂ ಇವರ ಬೆಂಗಳೂರು ನಗರದಲ್ಲಿನ ಎರಡು ಸಂಬಂಧಿಕರ ಮನೆ ಮತ್ತು ಇವರು ಕರ್ತವ್ಯ ನಿರ್ವಹಿಸುತ್ತಿರುವ ಮುಖ್ಯ ಅಭಿವೃದ್ಧಿ ಅಧಿಕಾರಿಯವರ ಕಛೇರಿ, ಕೆ.ಐ.ಎ.ಡಿ.ಬಿ, ಖನಿಜ ಭವನ ಬೆಂಗಳೂರು.

ವಿವಿಧ ಎಸಿಬಿ ತಂಡಗಳಿಂದ ಮೇಲ್ಕಂಡ ಆರೋಪಿತ ಸರ್ಕಾರಿ ನೌಕರರ ವಿರುದ್ಧ ದಾಳಿ ಮುಂದುವರೆದಿದ್ದು, ಸದರಿ ಸರ್ಕಾರಿ ನೌಕರರು ಹೊಂದಿರುವ ಆಸ್ತಿ-ಪಾಸ್ತಿಗಳ ಮೂಲದ ಬಗ್ಗೆ ತನಿಖೆ ಹಾಗೂ ದಾಖಲೆಗಳ ಪರಿಶೀಲನಾ ಕಾರ್ಯ ಹಾಗೂ ಸಂಬಂಧಪಟ್ಟ ಇನ್ನು ಹೆಚ್ಚಿನ ಸ್ಥಳಗಳ ಮಾಹಿತಿ ಸಂಗ್ರಹಣೆ ಮುಂದುವರೆದಿದೆ.

**ಸಂಖ್ಯೆ:1098/1198**

# ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

**ಬೆಂಗಳೂರು, ಅಕ್ಟೋಬರ್ 5, 2018 (ಕರ್ನಾಟಕ ವಾರ್ತೆ)**

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ **ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಆದೇಶ ಮತ್ತು ಸಲಹೆಯಂತೆ** ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು

ಹಮ್ಮಿಕೊಳ್ಳಲಾಗುತ್ತಿರುತ್ತದೆ. **ದಿನಾಂಕ: 07-10-2018** ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಕಬ್ಬನ್ ಉದ್ಯಾನವನದ ಆವರಣದಲ್ಲಿ ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ **ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

2) ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

**I ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ**

- ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ **ಯೂನಿವರ್ಸ್ ಆರ್ಟ್ ಫೌಂಡೇಶನ್** ಸಂಸ್ಥೆಯ ಸಹಯೋಗದೊಂದಿಗೆ **ಭರತನಾಟ್ಯ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

**ಸಂಖ್ಯೆ:1099/1199**

# ಪರೀಕ್ಷಾ ಶುಲ್ಕ ಪಾವತಿಸಲು ಅವಧಿ ವಿಸ್ತರಣೆ

ಬೆಂಗಳೂರು, ಅಕ್ಟೋಬರ್ 5, 2018 (ಕರ್ನಾಟಕ ವಾರ್ತೆ)

ಪೋಷಕರು ಮತ್ತು ವಿದ್ಯಾರ್ಥಿಗಳ ಕೋರಿಕೆಯ ಮೇರೆಗೆ ಮಾರ್ಚ್ 2019 ರಲ್ಲಿ ನಡೆಯುವ ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಗೆ ಪುನರಾವರ್ತಿತ ಮತ್ತು ಖಾಸಗಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಸಂದಾಯ ಮಾಡಲು ದಿನಾಂಕ: 17-10-2018 ರವರೆಗೆ ಅವಧಿ ವಿಸ್ತರಿಸಲಾಗಿದೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1100/1200**

## ಮಲೈ ಮಹದೇಶ್ವರಸ್ವಾಮಿ ವಾರ್ಷಿಕ ಜಾತ್ರೆಗಳು

ಬೆಂಗಳೂರು, ಅಕ್ಟೋಬರ್ 5, 2018 (ಕರ್ನಾಟಕ ವಾರ್ತೆ)

ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರವು ಕರ್ನಾಟಕ ರಾಜ್ಯ ಸರ್ಕಾರದ ಆಡಳಿತಕ್ಕೆ ಒಳಪಟ್ಟಿದ್ದು ಶ್ರೀ ದೇವಾಲಯದಲ್ಲಿ 2018ನೇ ಇಸವಿಯಲ್ಲಿ ಈ ಕೆಳಕಂಡ ಜಾತ್ರೆಗಳು ವಿಜೃಂಭಣೆಯಿಂದ ಜರುಗಲಿದೆ.

| | |
|---|---|
| ಮಹಾಲಯ ಜಾತ್ರೆ | – ದಿನಾಂಕ: 06-10-2018 ರಿಂದ 09-10-2018 ರ ವರೆಗೆ |
| ದಸರಾ ಜಾತ್ರೆ | – ದಿನಾಂಕ: 17-10-2018 ರಿಂದ 19-10-2018 ರ ವರೆಗೆ |
| ದೀಪಾವಳಿ | – ದಿನಾಂಕ: 05-11-2018 ರಿಂದ 12-11-2018 ರ ವರೆಗೆ |
| **ಕಾರ್ತೀಕ ಸೋಮವಾರಗಳು:** | |
| 1 ನೇ ಕಾರ್ತೀಕ ಸೋಮವಾರ | – ದಿನಾಂಕ: 11-11-2018 ರಿಂದ 12-11-2018 ರ ವರೆಗೆ |
| 2 ನೇ ಕಾರ್ತೀಕ ಸೋಮವಾರ | – ದಿನಾಂಕ: 18-11-2018 ರಿಂದ 19-11-2018 ರ ವರೆಗೆ |
| 3 ನೇ ಕಾರ್ತೀಕ ಸೋಮವಾರ | – ದಿನಾಂಕ: 25-11-2018 ರಿಂದ 26-11-2018 ರ ವರೆಗೆ |
| 4 ನೇ ಕಾರ್ತೀಕ ಸೋಮವಾರ | – ದಿನಾಂಕ: 02-12-2018 ರಿಂದ 03-12-2018 ರ ವರೆಗೆ |
| ಎಣ್ಣೆಮಜ್ಜನ ಮತ್ತು ಅಮಾವಾಸ್ಯೆ | – ದಿನಾಂಕ: 05-12-2018 ರಿಂದ 07-12-2018 ರ ವರೆಗೆ |

ಶ್ರೀ ಕ್ಷೇತ್ರದಲ್ಲಿ ನಡೆಯುವ ಈ ಜಾತ್ರಾ ದಿನಾಂಕಗಳಂದು ಭಕ್ತಾದಿಗಳು ಸಕಾಲದಲ್ಲಿ ಆಗಮಿಸಿ ಸ್ವಾಮಿಯವರ ಕೃಪೆಗೆ ಪಾತ್ರರಾಗುವಂತೆ ಕೋರಿ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದ ಅಭಿವೃದ್ಧಿ ಪ್ರಾಧಿಕಾರವು ತನ್ನ ಪ್ರಕಟಣೆ ಹೊರಡಿಸಿದೆ.

**ಸಂಖ್ಯೆ:1101/1201**

## ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ಅಕ್ಟೋಬರ್ 5, 2018 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಜಲಸಂಪನ್ಮೂಲ ಇಲಾಖೆಯ ಕಿರಿಯ ಅಭಿಯಂತರ (ಸಿವಿಲ್) ಹುದ್ದೆಗಳಿಗೆ ತಾತ್ಕಾಲಿನ ಆಯ್ಕೆಪಟ್ಟಿಯನ್ನು ದಿನಾಂಕ: 04-10-2018 ರಂದು ಆಯೋಗದ ವೆಬ್‌ಸೈಟ್ "http://kpsc.kar.nic.in/Selection Lists" ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಸದರಿ ತಾತ್ಕಾಲಿಕ ಆಯ್ಕೆಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಬಯಸುವ ಅಭ್ಯರ್ಥಿಗಳು ದಿನಾಂಕ: 10-10-2018 ರೊಳಗೆ (ಕಚೇರಿ ಕೆಲಸದ ವೇಳೆಯಲ್ಲಿ) ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ

ಆಯೋಗ, ಉದ್ಯೋಗ ಸೌಧ, ಬೆಂಗಳೂರು – 560 001 ಇವರಿಗೆ ತಲುಪುವಂತೆ ಸಲ್ಲಿಸಬೇಕು. ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1101/1201**

# "ಕಲಾಶ್ರೀ ಪ್ರಶಸ್ತಿ"

ಬೆಂಗಳೂರು, ಅಕ್ಟೋಬರ್ 5, 2018 (ಕರ್ನಾಟಕ ವಾರ್ತೆ)

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರತಿಷ್ಠಿತ ಕಾರ್ಯಕ್ರಮಗಳಲ್ಲಿ ಒಂದಾದ ಕರ್ನಾಟಕ "ಕಲಾಶ್ರೀ ಪ್ರಶಸ್ತಿ"ಗೆ ಸಂಗೀತ ಮತ್ತು ನೃತ್ಯ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸಿದ ಕಲಾವಿದರನ್ನು 2018–19 ನೇ ಸಾಲಿನ "ಕರ್ನಾಟಕ ಕಲಾಶ್ರೀ" ಪ್ರಶಸ್ತಿಗೆ ಅಕಾಡೆಮಿ ಅಧ್ಯಕ್ಷ ಫಯಾಜ್‌ಖಾನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸರ್ವಸದಸ್ಯರು ಈ ಕೆಳಕಂಡಂತ ಸರ್ವಾನುಮತದಿಂದ ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡಿದ್ದಾರೆ.

ಕರ್ನಾಟಕ ಕಲಾಶ್ರೀ ಗೌರವ ಪ್ರಶಸ್ತಿ:

ಶ್ರೀ ಫಕೀರಪ್ಪ ತಾಂದಳೆ, ಹಿರೇಕೆರೂರು, ಜಿಲ್ಲೇ ಹಾವೇರಿ – ಹಿಂದೂಸ್ಥಾನಿ ಸಂಗೀತ –ಪಕವಾಜ್

ಶ್ರೀ ಸದಾಶಿವ ಪಾಟೀಲ, ಕೊಪ್ಪಳ – ಸುಗಮ ಸಂಗೀತ

ಕರ್ನಾಟಕ ಕಲಾಶ್ರೀ ವಾರ್ಷಿಕ ಪ್ರಶಸ್ತಿಗಳು

ಕರ್ನಾಟಕ ಸಂಗೀತ

ಡಾ: ಬಿ.ಎಂ. ಜಯಶ್ರೀ, ಬೆಂಗಳೂರು – ಹಾಡುಗಾರಿಕೆ,

ಶ್ರೀ ಹೆಚ್.ಎಸ್. ವೇಣುಗೋಪಾಲ್, ಬೆಂಗಳೂರು – ಕೊಳಲು

ಅನೂರು ಅನಂತಕೃಷ್ಣ ಶರ್ಮ (ಶಿವು) ಬೆಂಗಳೂರು – ಮೃದಂಗ

ಪಿ. ನಾರಾಯಣಸ್ವಾಮಿ, ಕೋಲಾರ, ಡೋಲು

ಹಿಂದೂಸ್ತಾನಿ ಸಂಗೀತ

ಡಾ: ನಾಗರಾಜರಾವ್ ಹವಾಲ್ದಾರ್, ಬೆಂಗಳೂರು – ಗಾಯನ

ಶ್ರೀ ಸುಧಾಂಶು ಕುಲಕರ್ಣಿ, ಬೆಳಗಾಂ, ಹಾರ್ಮೋನಿಯಂ

ಶ್ರೀ ಸೋಮಶೇಖರ್ ಪಾಟೀಲ್, ಗುಲಬರ್ಗಾ– ತಬಲ

ನೃತ್ಯ

ಶ್ರೀ ಸುಭದ್ರಾ ಪ್ರಭು ಬೆಂಗಳೂರು – ಕುಚಿಪುಡಿ

ಡಾ: ಕೆ. ಕುಮಾರ್, ಮೈಸೂರು – ಭರತನಾಟ್ಯ

ಶ್ರೀಮತಿ ನಂದಿನಿ ಕೆ ಮೆಹ್ತಾ, ಬೆಂಗಳೂರು – ಕಥಕ್

ಶ್ರೀಮತಿ ರಾಜಶ್ರೀ ಎಸ್. ಶೆಣೈ, ಮಂಗಳೂರು ಭರತನಾಟ್ಯ

ಸುಗಮ ಸಂಗೀತ

ಶ್ರೀ ಎಚ್. ಫಲ್ಗುಣ, ಬೆಂಗಳೂರು

ಕಥಾ ಕೀರ್ತನ

ಶ್ರೀ ಶಿವಮೂರ್ತಿ ಶಾಸ್ತ್ರಿಗಳು ಹಿರೇಮಠ, ಹಾವೇರಿ

ಗಮಕ:

ಶ್ರೀ ಎಂ.ಆರ್. ಕೇಶವಮೂರ್ತಿ, ಬೆಂಗಳೂರು– ವಾಚನ

ಶ್ರೀ ಜಿ.ಎಸ್. ಶ್ರೀನಿವಾಸಮೂರ್ತಿ, ತುಮಕೂರು – ವ್ಯಾಖ್ಯಾನ

ಸಂಘ ಸಂಸ್ಥೆ:

ಶ್ರೀಮಂತ ನಾನಾಸಾಹೇಬ ನಾಡಗೀರ ಸ್ಮೃತಿ ಪ್ರತಿಷ್ಠಾನ (ರಿ) ಕುಂದಗೋಳ, ಜಿ: ಧಾರವಾಡ

ಪ್ರಶಸ್ತಿ ಪ್ರಧಾನ ಸಮಾರಂಭವನ್ನು 30–10–2018 ರಂದು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಏರ್ಪಡಿಸಲಾಗುವುದು. ಗೌರವ ಪ್ರಶಸ್ತಿ ಪುರಸ್ಕೃತರಿಗೆ ರೂ. 50,000/– , ಗೌರವಧನ, ವಾರ್ಷಿಕ ಪ್ರಶಸ್ತಿ ಪುರಸ್ಕೃತರಿಗೆ ರೂ. 25,000/– ಗಳ ಗೌರಧನ, ಶಾಲು, ನೆನಪಿನ ಕಾಣಿಕೆ, ಪ್ರಶಸ್ತಿ ಪತ್ರ ಹಾರ, ಫಲತಾಂಬೂಲಗಳನ್ನು "ಕರ್ನಾಟಕ ಕಲಾಶ್ರೀ" ಪ್ರಶಸ್ತಿಯೊಮದಿಗೆ ನೀಡಿ ಗೌರವಿಸಲಾಗುವುದೆಂದು ಪ್ರಕಟಣೆ ತಿಳಿಸಿದೆ.